# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 38/2022**

**ದೋ.ಸಾ. :4 ಫ್ರಾ.ಸಾ. : 2**

ಸಾಕ್ಷಿಯ ಹೆಸರು : ಅಸೀಫ್ ಮಹಮ್ಮದ್ ಶೇಖ್
ತಂದೆಯ ಹೆಸರು : ಮಹಮ್ಮದ್ ಶೇಖ್
ವಯಸ್ಸು : 31 ವರ್ಷ
ಕೆಲಸ : ಅಟೋ ಚಾಲಕ
ವಾಸ : ಅಂಕೋಲ

**ದಿನಾಂಕಃ 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಚಾ.ಸಾ.1, 5 ರಿಂದ 7 ನನ್ನ ಸಂಬಂಧಿಕರಾಗಿರುತ್ತಾರೆ. ಆರೋಪಿತರ ಪರಿಚಯವಿದೆ. 1 ಮತ್ತು 2 ನೇ ಆರೋಪಿತರು ಸೇರಿ ನನಗೆ ಅವಾಚ್ಯ ಶಬ್ದಗಳಿಂದ ಬೈದು, ದೂಡಾಡಿಲ್ಲ ಹಾಗೂ ಆರೋಪಿತರು ಚಾ.ಸಾ.6 ರವರಿಗೂ ಸಹ ಹೊಡೆದದ್ದು, ಬಡಿದಿದ್ದು ಇರುವುದಿಲ್ಲ ಹಾಗೂ ಅವಳ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿರುವುದಿಲ್ಲ. 3 ನೇ ಆರೋಪಿತನು ಚಾ.ಸಾ. 5 ರವರಿಗೆ ಹೊಡೆದಿಲ್ಲ. 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲಾ ಹೊಡೆದದ್ದು ಇರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿದ್ದು ಇರುವುದಿಲ್ಲ. ಚಾ.ಸಾ.6 ರವರು ಕೆಲಸ ಮಾಡುವಾಗ ಬಿದ್ದು ನೋವು ಮಾಡಿಕೊಂಡಿದ್ದು, ಈ ಬಗ್ಗೆ ಮುಂಡಗೋಡದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾಳೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ, ಹಾಗೂ ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಈಗ ತೋರಿಸಿದ ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಿ.ಪಿ. 2 ರ ವಿವರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ, ಅನುಮತಿ ನೀಡಲಾಯಿತು)

2. ದಿನಾಂಕ 14.04.2019 ರಂದು ನಾನು ಹಾಗೂ ಚಾ.ಸಾ.1 ಮತ್ತು 5 ರವರು ಸೇರಿ ನಮ್ಮ ಸಂಬಂಧಿಯಾದ ಶಬಾನ ಇವಳ ಮದುವೆಗೆ ಗುಂಜಾವತಿ ಗ್ರಾಮಕ್ಕೆ ಹೋಗಿದ್ದೆವು, ನಂತರ ಬಂದ ನೆಂಟರಿಗೆ ಊಟವನ್ನು ಕೊಡುತ್ತಿದ್ದೆವು, ಅಲ್ಲಿಗೆ ಊಟಕ್ಕೆ ಬಂದ 1 ನೇ ಆರೋಪಿತನು ಚಾ.ಸಾ.5 ರವರನ್ನು ಉದ್ದೇಶಿಸಿ ತಾನು ಊಟ ಮಾಡಿದ ತಟ್ಟೆಯಲ್ಲಿ ಬೇರೆಯವರಿಗೆ ಊಟ ಕೊಡು ಎಂದು ಹೇಳಿದಾಗ, ಆ ಸಮಯದಲ್ಲಿ ಮಾತಿಗೆ ಮಾತಾಗಿದ್ದು, 1 ನೇ ಆರೋಪಿತನು ತಟ್ಟೆಯಿಂದ ಚಾ.ಸಾ.5 ರವರಿಗೆ ಹೊಡೆಯಲು ಬಂದಿರುತ್ತಾನೆ ಎಂದರೆ ಸರಿಯಲ್ಲ.

3. ನಂತರ ದಿನಾಂಕ 15.04.2019 ರಂದು ರಾತ್ರಿ ನಾವು ಫಾತಿಮಾ ಇವರ ಮನೆಯಲ್ಲಿದ್ದಾಗ 1 ನೇ ಆರೋಪಿತನು ಅಲ್ಲಿಗೆ ಬಂದು ಚಾ.ಸಾ.7 ರವರ ಹತ್ತಿರ ನನಗೆ ಹೊಡೆಯುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾ.ಸಾ. 7 ಜಗಳ ಮಾಡಬೇಡಿ ಎಂದು ಹೇಳಿದಾಗ 1 ಮತ್ತು 2 ನೇ ಆರೋಪಿತರು ಸೇರಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿದರು ಎಂದರೆ ಸರಿಯಲ್ಲ. ಚಾ.ಸಾ 6 ರವರು ಅಲ್ಲಿಗೆ ಹೋದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.6 ವರಿಗೆ ಕೈಯಿಂದ ತಲೆಗೆ ಹೊಡೆದು, ಆಕೆಯ ಬಟ್ಟೆಯನ್ನು ಹರಿದು ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿ ದೂಡಿ ಹಾಕಿದರು ಎಂದರೆ ಸರಿಯಲ್ಲ. ಆಗ ಆಕೆ ಕೆಳಗೆ ಬಿದ್ದಿದ್ದು, ಆಕೆಯ ತಲೆಗೆ ಒಳಪೆಟ್ಟು ಆಯಿತು ಎಂದರೆ ಸರಿಯಲ್ಲ. ಇದನ್ನು ನೋಡಿ ಬಿಡಿಸಲು ಹೋದ ಚಾ.ಸಾ.5 ರವರಿಗೆ 3 ನೇ ಆರೋಪಿತನು ಕೈಯಿಂದ ಹೊಡೆದನು ಎಂದರೆ ಸರಿಯಲ್ಲ. ನಂತರ 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲರಿಗೂ ಕೈಯಿಂದ ಹೊಡೆದರು ಎಂದರೆ ಸರಿಯಲ್ಲ. ಊರಿನ ಜನ ಬರುವುದನ್ನು ನೋಡಿ, ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ನಾವು ಚಾ.ಸಾ.6 ರವರಿಗೆ ಮುಂಡಗೋಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಚಾ.ಸಾ. 1 ರವರು ದೂರನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 17.04.2019 ರಂದು ಈ ಘಟನೆಗ ಕುರಿತಂತೆ ಈ ಮೇಲೆ ಹೇಳಿದಂತೆ ಚಾ.ಸಾ.13 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಅದೇ ದಿನ ಘಟನಾ

ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದು, ಸ್ಥಳ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ನಿ.ಪಿ.2 ರಂತೆ ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ.

4. ಈ ಪ್ರಕರಣದ 4 ನೇ ಆರೋಪಿತನು ನನ್ನ ಹಾಗೂ ಚಾ.ಸಾ.1 ಮತ್ತು 5 ರವರ ಮೇಲೆ ದೂರನ್ನು ನೀಡಿದ್ದು,ಅದು ಇದೇ ನ್ಯಾಯಾಲಯದಲ್ಲಿ ಸ್ಪೆಶಲ್ ಕೇಸ್ ನಂಬರ 27/2020 ರಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಅವರು ಈ ಪ್ರಕಣದಲ್ಲಿ ನನ್ನ ಹಾಗೂ ಚಾ.ಸಾ.1 ಮತ್ತು 5 ರವರ ವಿರುದ್ಧ ಸಾಕ್ಷಿ ನುಡಿಯಬಹುದು ಎಂಬ ಕಾರಣದಿಂದಾಗಿ ನಾನು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎ.ಕೆ . ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ